Regd No M 1299 Sri ತಾ|| 4—10—51

SATYAVADI = 35th Year



ಸಂಪಾದಕರು- ಅರಮನೆ ಸಿರಸ್ತೆದಾರ್ ಎ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಶ್ರೀ ಚಂದ್ರಮೌಳೀಶ್ವರ ಸ್ವಾಮಿಯ ಮಹೋತ್ಸವದ ವೈಭವ ಏರ್ಪಾಡು

ಸ್ವಂ. ಸು. ತಂತಿ | ಡಾಕೋರ್ ಲ 3

ಡಾಕೋರಿನಲ್ಲಿ ನಿನ್ನೇ ದಿವಸ ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥಜೀ ಮಹಾಸ್ವಾಮಿಗಳವರ ೫೫ ನೇ ಜನ್ಮದಿನೋತ್ಸವವು ಅತಿ ವೈಭವದಿಂದ ಆಚರಿಸಲಾಯಿತು ಜಗದ್ಗುರುಗಳವರ ಭಾರಿ ಮೆರವಣಿಗೆಯು ನಡೆಯಿತು ವೇ ನಾಡ ಬ್ರಾಹ್ಮಣರು ಮತ್ತು ಇತರ ಸಾರ್ವಜನಿಕರು ಪ್ರಚಂಡ ಸಭೆಯಲ್ಲಿ ಭಕ್ತಿಪೂರ್ವಕವಾಗಿ ಶ್ರೀ ಜಗದ್ಗುರುಗಳವರಿಗೆ ಅಭಿನಂದನೆ ಸಲ್ಲಿಸಿದರು ; ಶ್ರೀ ಶ್ರೀಗಳವರು ಎಲ್ಲರನ್ನೂ ಆಶೀರ್ವದಿಸಿ, ಎಲ್ಲರೂ ತಮ್ಮ ಧರ್ಮವನ್ನು ಕಡಾಖಂಡಿತವಾಗಿ ಆಚರಿಸಬೇಕೆಂದು ತಿಳಿಸಿದರು ; ಮತ್ತು ಪ್ರಸಂಗದಲ್ಲಿ ಶಾಂತಿಸಮೃದ್ಧಿ ನೆಲೆಸಲು ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿದರು. ಇಲ್ಲಿ ತಾ|| 7 ರಿಂದ 12 ರವರೆಗೆ ನಡೆಯುವ ಶ್ರೀ ಚಂದ್ರಮೌಳೀಶ್ವರ ಮಹೋತ್ಸವಕ್ಕೆ ವೈಭವ ಏರ್ಪಾಟು ನಡೆಯುತ್ತಿದೆ : ಮಹಾ ಸಂತ ಸ್ವಾಮಿ ಕಂಪಾತ್ರಜೀಯವರು ಡಾಕೋರಿಗೆ ತಾ|| 7 ಪ್ರಾತಃಕಾಲ ಆಗಮಿಸಿ, ಭಾರಿ ಸಭೆಗಳಲ್ಲಿ ಭಾಷಣಮಾಡುವರು ; ಶ್ರೀ ಗೋವರ್ಧನ ಪೀಠದ ಶ್ರೀ ಜಗದ್ಗುರು ಶಂಕರಾಚಾರ್ಯರವರೂ ಮತ್ತು ಇತರ ಮುಖಂಡರು ಆಗಮಿಸುವ ನಿರೀಕ್ಷಣೆಯಿದೆ.

ಓದಿ ಓದಿ ಹುಚ್ಚು ಹಿಡಿಯಿತು

ನಾಗಪುರ— ಇಂಟರ್ ಆರ್ಟ್ಸ್ ಪರೀಕ್ಷೆಗೆಂದು ಬಂದಿರುವ ಒಬ್ಬ ವಿದ್ಯಾರ್ಥಿನಿಯು ಅತಿ ಅಭ್ಯಾಸದಿಂದ ಹುಚ್ಚಿಯಾಗಿಬಿಟ್ಟಿದ್ದಾಳೆ ; ಕಾನು ಹುಚ್ಚಿಯಲ್ಲ, ಎಂ ಇ ಡಿ ಎಂದು ಕೂಗುತ್ತಾ ಬೇಕಾದ ಭಾಷೆಯಲ್ಲಿ ಬೇಕಾದಂತೆ ವ್ಯಾಖ್ಯಾನ ಪ್ರಾರಂಭಿಸಿಬಿಡುತ್ತಾಳೆ ; ಅವಳನ್ನೀಗ ತತ್ಪೂರ್ವಕವಾಗಿ ಹುಚ್ಚರ ಆಸ್ಪತ್ರೆಗೆ ಸೇರಿಸಲಾಗಿದೆ

ಭೂದಾನ ಯಜ್ಞ

ದೇವರಿ (ಮಧ್ಯಪ್ರದೇಶ) — " ಭೂಮಿಯಿಲ್ಲದವರಿಗಾಗಿ ಹಂಚಲು ಭೂಮಿಯನ್ನು ಬೇಡುವ ನನ್ನ ಉಪಕ್ರಮಕ್ಕೆ ನನ್ನ ನಿರೀಕ್ಷಣೆಗಿಂತಲೂ ಹೆಚ್ಚಾಗಿ ಪ್ರೋತ್ಸಾಹ ದೊರೆತಿದೆ " ಎಂದು ಆಚಾರ್ಯ ವಿನೋಬಾರವರು ಸಾರ್ವಜನಿಕ ಸಭೆಯೊಂದರಲ್ಲಿ ತಿಳಿಸಿದರು ವಾರ್ಧಾದಿಂದ ಹೊರಟುದಿನಿಂದ ಅವರಿಗೆ ಒಟ್ಟು ೫೬೦೦ ಎಕರೆ ಭೂಮಿ ದೊರೆತಿದೆ

ಸ್ಕ್ರೀಯರ ಕುಸ್ತಿ ಪಂದ್ಯಗಳು

ಸಿಮ್ಲಾ— ಇದೇ ಅಕ್ಟೋಬರು 6 ಮತ್ತು 7 ರಲ್ಲಿ ಸ್ಕ್ರೀಯರ ಪ್ರಚಂಡ ಕುಸ್ತಿ ಪಂದ್ಯಗಳಿವೆ ; ಪಂಜಾಬು, ಹಿಮಾಚಲ ಪ್ರದೇಶ ಮತ್ತು ಪಾಟಿಯಾಲ ಮುಂತಾದ ಸಂಸ್ಥಾನಗಳಲ್ಲಿಯ ಸ್ಕ್ರೀಯರು ಈ ಕುಸ್ತಿಯಲ್ಲಿ ಭಾಗವಹಿಸುವರು ಈ ಕುಸ್ತಿಯಲ್ಲಿ ಪೇರುಮನ ತೂಕ ೧೬೦ ಪೌಂಡಿಗಿಂತ ಹೆಚ್ಚಾಗಿರಬೇಕು.

ಭಾರತದ ಬಡವರಿಗೆ ಹಂಚಲು ಐದು ಕೋಟಿ ಎಕರೆ ಭೂಮಿ ?

ಆಚಾರ್ಯ ವಿನೋಬ ಭಾವೆ ಮೊನ್ನೆ ದಿನ ಸವ್ಯಗರಿನಲ್ಲಿ ಹೇಳಿಕೆಕೊಟ್ಟ ಭಾರತದಲ್ಲಿ ಬಡವರಿಗೆ ಹಂಚಲು 5 ಕೋಟಿ ಎಕರೆ ಭೂಮಿ ದೊರೆತರೆ ಸಾಕು, ಈ ಬಗೆಗೆ ಭಾರತದಲ್ಲಿ ಶಾಂತಿಯುತ ಕ್ರಾಂತಿ ನಡೆವುದು ಎಂದರು

— ಇದೇ ತಾ|| 22 ರ ವರಿಗೆ, ಆದಾಯ ತೆರಿಗೆ ಕೊಡದಿರುವ ಬಗೆಗೆ ತಾವಾಗಿಯೇ ಮುಂದೆ ಬಂದು ವಿವರಗಳನ್ನು ಕೊಡಲು ಕಾಲಾವಕಾಶ ಕೊಡಲು ಭಾರತ ಸರ್ಕಾರ ನಿರ್ಧರಿಸಿರುವ ಅಂಶವನ್ನು ಉಪ ಸಚಿವ ಶ್ರೀ ತ್ಯಾಗಿ ದೆಹಲಿಯಲ್ಲಿ ತಿಳಿಸಿರುವರು

ಮೈಸೂರು ರೇಸಸ್

3—10—51 ರ ಫಲಿತಾಂಶ

1 ಜೂ ಪ್ಲೇಟ್

ಚಾವಿಂಗ್ ಕ್ಯಾಸ್, ಕಿಂಗ್ ಡ್ರೇಯಿ

ಟೋಟು — ವಿನ್ ರೂ 6—8—0, ಪ್ಲೇಸ್ ರೂ 5—8—0, ರೂ 6

2 ಜೋಗ್ ಪ್ಲೇಟ್

ಬ್ಲೂ ಫ್ಲೇಮ್, ರಸೇಂದ್ರ

ಟೋಟು — ವಿನ್ ರೂ. 14—8, ಪ್ಲೇಸ್ ರೂ 7—8, ರೂ 8

3 ಲಕ್ಷ್ಮೀಕಾಂತರಾಜೆ ಅರ್ಸ್ ಮೆಮೋರಿಯಲ್ ಕಪ್ ಡಿ 2

ಫೈಂ ಗೋಲ್ಡ್, ರತಿ ಕುಮಾರಿ, ಗೋಲ್ಡನ್ ಲೇಜ್

ಟೋಟು — ವಿನ್ ರೂ. 33, ಪ್ಲೇಸ್ ರೂ 8, 6, 6—8—0.

4 ರಾಮೇಶ್ವರ ಪ್ಲೇಟ್

ಎಂಟರ್ ಪೀಟ್, ಪ್ರೈಡ್ ಆಂಟ್ ಬ್ಸ್

ಟೋಟು — ವಿನ್ ರೂ. 17, ಪ್ಲೇಸ್ ರೂ. 7, ರೂ 6 8-0

5 ಲಕ್ಷ್ಮೀಕಾಂತರಾಜೆಅರ್ಸ್ ಮೆಮೋರಿಯಲ್ ಕಪ್ ಡಿ 1

ಆಪ್‌ರೈಟ್ ಲೇಡಿ ಕ್ಲಿಯೋಪಾತ್ರ, ಸರ್ ಬಸ್ಟ್,

ಟೋಟು — ವಿನ್ ರೂ 152, ಪ್ಲೇಸ್ ರೂ 24 11, 12.

6 ಗುಜರಾತ ಪ್ಲೇಟ್

ಗೋಲ್ಡನ್ ಬಾಯ್, ಪಾಸ್ಟ್ ದಿ ಪೋಸ್ಟ್

ಟೋಟು — ವಿನ್ ರೂ. 15—8, ಪ್ಲೇಸ್ ರೂ. 6—8—0, 7.

ಟ್ರಬಲ್ ಈವೆಂಟ್, ರೇಸುಗಳು 3, 5, 6 ಪಡೆದ ಒಂದೇ ಒಂದು ಟಿಕೀಟಿಗೆ ರೂ. 5051

ಜಂಪಾನ ರೇಸಸ್

ರೇಸ್‌ಕೋರ್ಸಿನಲ್ಲಿ 3 ದಿವಸಗಳು ಈ ತಿಂಗಳು ತಾ|| 9, 21, 24 ರಲ್ಲಿ ಜಂಪಾನಾ ರೇಸಸ ಏರ್ಪಾಟಾಗಿದೆ; ರೇಸಿನ ಸಂಬಂಧದ ಎಲ್ಲ ಸೌಲಭ್ಯಗಳನ್ನೆ

ದಿವ್ಯವಾಣಿ

ನಿನ್ನ ಹೃದಯವನ್ನು ಪರಿಶುದ್ಧಿಗೊಳಿಸಿ ಔದಾರ್ಯವನ್ನು ಹೆಚ್ಚಿಸಿಕೊಳ್ಳಿ : ನಿನ್ನ ಹೃದಯವನ್ನು ಸಮುದ್ರದಷ್ಟು ವಿಶಾಲಗೊಳಿಸಿಕೊಳ್ಳಿ ; ಇನ್ನೊಬ್ಬರನ್ನು ಕೂಗಿ ನೋಡುವ ಮಹಾನ್ಯಾಯಾಧೀಶ ಬಿರೆ ಇದ್ದಾನೆ

— ಮಹಾತ್ಮ ಗಾಂಧಿ

ಮೈಸೂರು ಪ್ರಾಂತೀಯ ಕಿಸಾನ್ ಮಜದೂರ ಪ್ರಜಾಪಕ್ಷದ ಸಮ್ಮೇಳನವನ್ನು ಶ್ರೀ ಆಚಾರ್ಯ ಕೃಪಾಲಿನಿಜೀಯವರ ಅಧ್ಯಕ್ಷತೆಯಲ್ಲಿ 21 ನೇ ತಾ|| ಭಾನುವಾರ ನಡೆಸಬೇಕೆಂದು ಬೆಂಗಳೂರಿನಲ್ಲಿ ಸಮಾವೇಶವಾಗಿದ್ದ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಾಳೆ ಬೆಳಿಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾಧಿಕಾರಿ ಶ್ರೀ ಸಿ ನರಸಿಂಹಮೂರ್ತಿಯವರು ಪಾಂಡವಪುರದಲ್ಲಿ ಕೋಕಿಲ ಟಾಕೀಸಿನ್ನು ವಿಜಯದೇವರ ಪಾತಾಳ ಭೈರವಿ ಪ್ರದರ್ಶನದೊಡನೆ ಪ್ರಾರಂಭಿಸುವರು

× ಬ್ರಿಟನ್ನಿನ ಲೇಬರ್ ಪಕ್ಷದ ಧುರೀಣ ಬಿವಾನಬವರು ಲಂಡನ್ನಿನಲ್ಲಿ ಕೊಟ್ಟ ಹೇಳಿಕೆಯಲ್ಲಿ ಸೋವಿಯೆಟ್ ರಷ್ಯ ಮತ್ತು ಪಶ್ಚಿಮ ರಾಜ್ಯಗಳಿಗೆ ಸಂಭವಿಸಿರುವ ಬಿಕ್ಕಟ್ಟಿಗೆ ಚರ್ಚಿಲರೇ ಕಾರಣರೆಂದಿರುವರು

ಪೀಕಿಂಗಿನ ವಾರ್ತೆ ಪ್ರಕಾರ ಕೊರಿಯ ಸಮರ ಈಗಾಗಲೇ ಮುಗಿಯುವದಿಲ್ಲವೆಂದು ಹೇಳಲಾಗಿದೆ

ಮಹಾ ಚುನಾವಣೆಯಲ್ಲಿ ಬೊಂಬಾಯಿ ಮುಖ್ಯಮಂತ್ರಿ ಶ್ರೀ ಬಿ ಜಿ ಖೇರರು ಸ್ಪರ್ಧಿಸುವದಿಲ್ಲವೆಂದು ವದಂತಿಯಾಗಿತ್ತು

ಪಾಟಿಯಾಲಾದಲ್ಲಿ ನೊನ್ನೆ ಅಧ್ಯಕ್ಷ ರಾಜೇಂದ್ರಬಾಬು ಹೇಳಿಕೆ ಇತ್ತು ಗಾಂಧೀಯವರು ಬದುಕಿದ್ದರೆ ಪ್ರಪಂಚ ಶಾಂತಿ ಸ್ಥಾಪನಾ ಕಾರ್ಯ ಸಾಧಿಸುತ್ತಿದ್ದರೆಂದು

ವಾರ್ತೆಗಳು

ನವದೆಹಲಿ— ರೈಲ್ವೆಗಳ ಮುಖ್ಯ ಸರಕಾರಿ ಇನ್‌ಸ್ಪೆಕ್ಟರು ಪ್ರಕಟಿಸಿರುವ ವಾರ್ಷಿಕ ವರದಿಯಲ್ಲಿ 50-51 ರಲ್ಲಿ 23 ರೈಲ್ವೇ ಅಪಘಾತಗಳು ಸಂಭವಿಸಿದವೆಂದು ಹೇಳಲಾಗಿದೆ

ಲೇಕ್‌ಸಕ್ಸಸ್— ಯುದ್ಧಕ್ಕೆ ಮುಂಚಿಗಿಂತ ಈಗ ಕಡಮೆ ಕಾಗದವನ್ನು ಬಳಸುತ್ತಿದ್ದರೂ ಬ್ರಿಟನ್ನಿನಲ್ಲಿ ದಿನಪತ್ರಿಕೆಯು ಚಂದಾದಾರರ ಸಂಖ್ಯೆ ಜಗತ್ತಿನಲ್ಲೇ ದೊಡ್ಡದಾಗಿದೆಯೆಂದು ಪ್ರಕಟವಾಗಿದೆ — ಬ್ರಿಟನ್ನಿನಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ 660 ಜನರು ದಿನಪತ್ರಿಕೆ ಕೊಳ್ಳುತ್ತಾರೆ ; ಅಮೆರಿಕಾದಲ್ಲಿ ಸಾವಿರಕ್ಕೆ 354 ಜನ ಕೊಳ್ಳುತ್ತಾನೆ ; ಭಾರತ ಮತ್ತು ಬಹ್ಮದೇಶಗಳಲ್ಲಿ ಸಾವಿರಕ್ಕೆ 6 ಜನ ಕೊಳ್ಳುತ್ತಾರೆ : ಪಾಕಿಸ್ತಾನದಲ್ಲಿ ಸಾವಿರಕ್ಕೆ 4 · ಅಫ್ಘಾನಿಸ್ತಾನದಲ್ಲಿ ಸಾವಿರಕ್ಕೆ ಒಬ್ಬ ಮಾತ್ರ ಪತ್ರಿಕೆ ಕೊಳ್ಳುವುದು

ಟೋಕಿಯೊ— 170 ಪಾಪಿಣಿ ಕೆಲಸಗಾರರಿರುವ ಗಣಿ ಕೆಲಸಗಾರರ ಮಹಾಮಂಡಲವು ಸುಬಳ ಹೆಚ್ಚಿಸಿಕೊಳ್ಳಲು 8 ದಿನ ಮುಷ್ಕರ ಹೂಡಲು ನಿಶ್ಚಯಿಸಿದ್ದಾರೆ

ನವದೆಹಲಿ— ಅರ್ಥ ಮಂತ್ರಿಶಾಖೆಯು ಅಡಗಿಸಿಟ್ಟ ಉತ್ಪನ್ನವನ್ನು ಬಹಿರಂಗಪಡಿಸಲು ಇತ್ತಿದ್ದ ಕೊನೆ ದಿನಕ್ಕೆ ಒಟ್ಟು ೧೩ ಕೋಟಿ ರೂಗಳ ಉತ್ಪನ್ನ ಬಯಲಿಗೆ ಬಂದಿದೆ

ಕರ್ನಾಟಕದ ಸರ್ವಾಂಗೀಣ ಪ್ರಗತಿಯ ದೃಷ್ಟಿಯಿಂದ ನಮ್ಮ ವಿಶ್ವವಿದ್ಯಾಲಯವನ್ನು ಕಟ್ಟುವುದು ಅತ್ಯಗತ್ಯ : ಆ ದೃಷ್ಟಿಯಿಂದ ವಿಶ್ವವಿದ್ಯಾಲಯವು ಈಗಾಗಲೇ ಸ್ವಾತಕೋತ್ತರ ಶಿಕ್ಷಣ ಏರ್ಪಾಡುಮಾಡಿದ್ದು ಸ್ತುತ್ಯಕಾರ್ಯ ; ಆದರೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಮೊದಲನೆ ಸ್ಥಾನ ಕೊಡಬೇಕಾದದ್ದು ವಿಶ್ವವಿದ್ಯಾಲಯದ ಕರ್ತವ್ಯ ; ಕಾರಣ ಕನ್ನಡ ಪ್ರೌಢಶಿಕ್ಷಣವನ್ನು ನೀಡಿಸಲು ಮುಂಗಡ ಪತ್ರಿಕೆಯಲ್ಲಿ ಅಚ್ಚುಹಾಕಬೇಕು ' ಎಂದು ಮುಂತಾಗಿ ಪ್ರೊ ॥ ಮುಗಳಿಯವರು ಕರ್ನಾಟಕ ವಿಶ್ವವಿದ್ಯಾಲಯದ ಸೆನೇಟು ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು



"ಗೋರಕ್ಷಣ"

ಕಾರ್ಯ. ಎಲ್ಲೆಲ್ಲೂ ನಡೆಯಲಿ

Protect the Cow

ಉಡ್‌ಲ್ಯಾಂಡ್
ಶಿ ನ
5-10-51 ರಿಂದ
ನಿರೂಪ ರಾಯ್, ತ್ರಿಲೋಕ್ ಕಪೂರ್
ಅಭಿನಯಿಸಿರುವ
ಪ್ರತಿ ಸರಸಾರವೂ ನೋಡಲೇಬೇಕಾದ
ಅಮೋಘ ಪೌರಾಣಿಕ ಹಿಂದಿ ಚಿತ್ರ
ಗಣೇಶ ಜನ್ಮ
ಪ್ರತಿ ದಿನ 3 ಪ್ರದರ್ಶನಗಳು

ಅಪೇರ—
28-9-51 ರಿಂದ
ಸರ್ವಾಧಿಕಾರಿ
ಮಹೋನ್ನತ ತಮಿಳು ಚಿತ್ರ
ಪಾತ್ರ — ಅಂಜಲಿದೇವಿ, ನಾಗಯ್ಯ,
ರಾಮಂಜಂದ್ರಕ್, ಸಂಬಿಯಾರ್
ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 4-10-51 ರಿಂದ
ONE MILLION B. C.

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಸತ್ಯವಾದಿ ಸೋಮವಾರ ಸಂಚಿಕೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

SATYAVADI
Advt Rate, Casual
Rs. 2 per Col Inch

ರಣಜಿತ್
— ಈ ದಿವಸ —
ಫಿಲಂಸ್ಥಾನ್ ವರದ
ಮನಮೋಹನ ಹಿಂದಿ ಚಿತ್ರ
ಶಬಿನಾನ್
ಪಾತ್ರ— ಕಣ್ಮರೆಯಾದ ಶ್ಯಾಂ,
ನಸೀಮ್, ಸಪ್ರು, ಕಕ್ಕು
ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 2-10-51 ರಿ
ಅನ್ನು ಕಿ ಆದ (ಹಿಂದಿ)

For Quality Printing
L. N. Press
Sivarampet, Mysore

ಮೋತಿಲಾಲ್ **5-10-51 ರಿಂದ**
ಬಡಿ ಬಹೂ
ನಿಮ್ಮಿ, ಶೇಖರ್, ಸುಲೋಚನಾ ಚಟರ್ಜಿ ಪಾತ್ರವಹಿಸಿರುವ
ಅಮೋಘ ಹಿಂದಿ ಚಿತ್ರ — ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 2-10-51 ರಿಂದ 7 ದಿನಗಳು
ಕಿಂಗ್ ಆಫ್ ದಿ ರಾಕೆಟ್ ಮೆನ್ (ರಿಪಬ್ಲಿಕ್ ಸೀರಿಯಲ್)

SHAKTI SUDHA
A Superb Tonic

Edited, Printed and Published by Dharma Prachara Nipuna M. S. Krishna Rao, at the Satyavadi Press Chamrajpura Mysore.